ಕರ್ನಾಟಕ ತಂಬಾಕು ಮಹಾ ಮಂಡಳಿ ಬಗ್ಗೆ

ಶ್ರೀ. ವೀರಕುಮಾರ್ ಎ. ಪಾಟೀಲ್ (ನಿಪ್ಪಾಣಿ) ಮತ್ತು ಮಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ) ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ತಂಬಾಕು ಮಹಾ ಮಂಡಳಿಯವರು ರೈತರಿಂದ ಖರೀದಿ ಮಾಡಿದ ಹೊಗೆ ಸೊಪ್ಪಿನ ಬಾಬ್ತು ಕಳೆದ ಮೂರು ವರ್ಷಗಳಲ್ಲಿ ಕೊಟ್ಟಂತೆ ಒಟ್ಟು ಹಣ (ಸಾದಿಲ್ವಾರು) ಮತ್ತು ಜಿಲ್ಲಾವಾರು ಅಂಕಿಅಂಶಗಳನ್ನು ಕೊಡುವುದು;

ಆ) ತಂಬಾಕು ಮಹಾ ಮಂಡಳಿಯು ಈ ದಿನದವರೆವಿಗೆ ಸಹಕಾರ ಸಂಘಗಳಿಗೆ ಕೊಡತಕ್ಕಂಥ ಒಟ್ಟು ಮೊಬಲಗು (ಪ್ರತಿಯೊಂದು ಸಂಘಕ್ಕೆ ಸಂಬಂದಿಸಿದ ವಿವರಗಳನ್ನು ಕೊಡುವುದು;

ಇ) ಮಂಡಳಿಯಲ್ಲಿರುವ ತಂಬಾಕಿನ ಒಟ್ಟು ದಾಸ್ತಾನು;

ಈ) ದಾಸ್ತಾನನ್ನು ವಿಲೇವಾರಿ ಮಾಡಲು ಕೈಗೊಂಡ ಕ್ರಮ ?

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಮಂತ್ರಿಗಳು).—

ಅ) ಕಳೆದ ಮೂರು ವರ್ಷಗಳಲ್ಲಿ ತಂಬಾಕು ಮಹಾ ಮಂಡಳಿವು ರೈತರಿಂದ ತಂಬಾಕನ್ನು ಖರೀದಿಸಿದ ಬಗ್ಗೆ ಕೊಟ್ಟಿರುವ ಒಟ್ಟು ಮೊಬಲಗಿನ ವಿವರಗಳು ಕೆಳಗಿನಂತಿವೆ.—

ವರ್ಷ	ಮೊಬಲಗು ರೂ.
೧೯೮೩-೮೪	೩೩,೬೮,೧೧೨-೨೫
೧೯೮೪-೮೫	೩೮,೮೪,೮೮೮-೭೦
೧೯೮೫-೮೬	೮೨,೬೯,೧೪೦-೮೭
೧೯೮೬-೮೭ (೧-೭-೮೬ ರಿಂದ ೨೮-೨-೮೭ ರವರೆವಿಗೂ)	೪೬,೭೬,೪೧೭-೩೫
	೨,೦೧,೯೮,೫೫೯-೧೫

ಮಹಾ ಮಂಡಳಿಯು ಬೆಳಗಾಂ ಜಿಲ್ಲೆಯಿಂದ ಮಾತ್ರ ತಂಬಾಕನ್ನು ಖರೀದಿಸಿತು.

೧	ಬೆದಕಿಹಾಳ ವ್ಯ. ಸೇ. ಸ. ಸಂಘ ನಿ.	೧,೩೩,೭೦
೨	ಏಕ್ಸಂಬ ವ್ಯ. ಸೇ. ಸ. ಸಂಘ ನಿ.	೧,೮೭೬-೩೫
೩	ಸಾದಲ್ಗ (ಪಶ್ಚಿಮ) ಎಲ್‌ಎಸ್‌ಎಂಪಿ ಸೊಸೈಟಿ	೭೪೬-೧೮
೪	ಬೂದಿಹಾಳ್ ವಿ. ಕೆ. ಎಸ್. ಎಸ್. ಎಸ್. ಲಿ.	೯೬,೮೯೭-೧೯
೫	ಕದಕ್‌ಲಾಟ್ ಜಿಎಸ್‌ಎಸ್‌ಎಸ್ ಲಿ.	೩೯,೪೩೮-೮೯
೬	ಪಾತಕಂಡಿ ಜಿಎಸ್‌ಎಸ್‌ಎಸ್ ಲಿ.	೧೩೭-೦೭
೭	ಕರಜಗ ಜಿಎಸ್‌ಎಸ್‌ಎಸ್ ಲಿ.	೮೯-೦೦
೮	ನಿಪ್ಪಾಣಿ ವಿಎಸ್‌ಎಸ್‌ಎಸ್ ಲಿ.	೭೭,೨೬೧-೨೫
	ಒಟ್ಟು ರೂ.	೧.೪೭,೭೭೮-೬೬

ಇ) ದಿನಾಂಕ: ೨೮-೨-೮೭ರವರೆಗೆ ೧,೪೮೨ ಮೆಟ್ರಿಕ್ ಟನ್‌ಗಳಷ್ಟು ತಂಬಾಕು ಮಂಡಳಿಯಲ್ಲಿ ದಾಸ್ತಾನು ಇದೆ.

ಈ) ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ ತಂಬಾಕು ಮಾದರಿಗಳನ್ನು ಸಹ ದೇಶದಲ್ಲಿರುವ ತಂಬಾಕು ವ್ಯಾಪಾರಸ್ಥರಿಗೆ ಕಳುಹಿಸಿ ಕೊಡಲಾಗಿದೆ. ಈಗಿರುವ ದಾಸ್ತಾನನ್ನು ವಿಲೇವಾರಿ ಮಾಡುವಲ್ಲಿ, ೬೫೫ ಮೆಟ್ರಿಕ್ ಟನ್‌ಗಳ ಹೊಗೆಸೊಪ್ಪನ್ನು ಮಾರಾಟ ಮಾಡಲು ಮಂಡಳಿವು ವರ್ತಕರ ಜೊತೆಗೆ

ಒಪ್ಪಂದ ಮಾಡಿ ಕೊಂಡಿರುವುದು, ಇನ್ನುಳಿದ ೮೨೭ ಮೆಟ್ರಿಕ್ ಟನ್‌ಗಳ ತಂಬಾಕನ್ನು ಮಾರಾಟ ಮಾಡಲು ವರ್ತಕರ ಜೊತೆಗೆ ಮಾತುಕತೆಗಳು ನಡೆದಿರುವುವು. ಈ ಮಾತುಗಳು ಮುಕ್ತಾಯವಾಗುವ ನಿರೀಕ್ಷೆ ಇದೆ.

೨-೦೫ ಪಿ.ಎಂ.

ವರದಿಯನ್ನೊಪ್ಪಿಸುವುದು

ಉಪಾಧ್ಯಕ್ಷರು.—ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ನಾಲ್ಕನೆಯ ವರದಿಯನ್ನು ಒಪ್ಪಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಸಭೆಯು ವರದಿಯನ್ನು ಒಪ್ಪುವುದೆಂದು ಸೂಚಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಕೆ. ಬಿ. ಕೋಳಿವಾಡ್.—(೧) ರಾಣೆಬೆನ್ನೂರು ತಾಲೂಕಿನ ಮುದೇನೂರು ಗ್ರಾಮದಲ್ಲಿರುವ ಚಾವಡಿ ಹಾಗೂ ಕೊಂಡವಾಡಗಳನ್ನು ದುರಸ್ತಿ ಮಾಡುವ ಬಗ್ಗೆ.

(ಅ) ರಾಣೆಬೆನ್ನೂರು ತಾಲೂಕಿನ ಮುದೇನೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪಶುವೈದ್ಯ ಶಾಲೆಯನ್ನು ತೆರೆಯುವ ಬಗ್ಗೆ.

(ಇ) ರಾಣೆಬೆನ್ನೂರು ತಾಲೂಕಿನ ಮುದೇನೂರು ಗ್ರಾಮದಲ್ಲಿ ಬಸ್ ನಿಲ್ದಾಣ ಕಟ್ಟಿಸುವ ಬಗ್ಗೆ.

(ಈ) ರಾಣೆಬೆನ್ನೂರು ತಾಲೂಕಿನ ಮುದೇನೂರು—ಮಳಗೊಂಡಿ ರಸ್ತೆಯ ದುರಸ್ತಿ ಬಗ್ಗೆ.

(ಉ) ರಾಣೆಬೆನ್ನೂರು ತಾಲೂಕಿನ ಮುದೇನೂರು ಗ್ರಾಮದ ರಸ್ತೆಯನ್ನು ಡಾಂಬರೀಕರಣ ಮಾಡುವ ಬಗ್ಗೆ.

(ಊ) ರಾಣೆಬೆನ್ನೂರು ತಾಲೂಕಿನ ಮುದೇನೂರು ಗ್ರಾಮದಲ್ಲಿ ಸರ್ಕಾರಿ ನೌಕರರಿಗೆ ವಸತಿ ಗೃಹಗಳನ್ನು ಕಟ್ಟಿಸುವ ಬಗ್ಗೆ.

(ಋ) ಹರಿಹರ ತಾಲೂಕಿನ ನಂದಿಗುಡಿ ಹತ್ತಿರ ತುಂಗಭದ್ರಾ ನದಿಗೆ ಸೇತುವೆ ನಿರ್ಮಾಣದ ಬಗ್ಗೆ.

ಮಾನ್ಯ ಅಧ್ಯಕ್ಷರೇ ಮೇಲ್ಕಂಡ ಅರ್ಜಿಗಳನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಗಳನ್ನು ಮಂಡಿಸಲಾಯಿತು.

ಗಮನ ಸೆಳೆಯುವ ಸೂಚನೆ

ರಾಜ್ಯದಿಂದ ತಮಿಳುನಾಡಿಗೆ ಕಾವೇರಿ ಮತ್ತು ಕಬಿನಿ ನದಿಗಳ ನೀರನ್ನು ಒದಗಿಸುತ್ತಿರುವುದರಿಂದ ಉಂಟಾಗಿರುವ ತೊಂದರೆಯ ಬಗ್ಗೆ.

ಶ್ರೀ ಹೆಚ್. ಡಿ. ಚೌಡಯ್ಯ.—ಅಧ್ಯಕ್ಷರೇ ನಾನು ರಾಜ್ಯದಿಂದ ತಮಿಳುನಾಡಿಗೆ ಕಾವೇರಿ ಮತ್ತು ಕಬಿನಿ ನದಿಗಳ ನೀರನ್ನು ಒದಗಿಸುತ್ತಿರುವುದರಿಂದ ಉಂಟಾಗಿರುವ ತೊಂದರೆಯ ಬಗ್ಗೆ ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಕೆಳಕಂಡಂತೆ ಹೇಳಿಕೆಯನ್ನು ಮಾಡಲು ಬಯಸುತ್ತೇನೆ.